ಓ.ಎಸ್. ನಂ. 4 /2017
DW-4

**<u>ಸಾಕ್ಷಿಯನ್ನು ದಿನಾಂಕ: 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ಶ್ರೀ DGT ವಕೀಲರಿಂದ</u>**

1. ನಾನು ಹುಟ್ಟಿದಾಗಿನಿಂದಲೂ ಲಿಂಗಾಪುರ ಗ್ರಾಮದಲ್ಲಿ ವಾಸ ಮಾಡುತ್ತಿರುತ್ತೇನೆ. ನಮ್ಮ ಗ್ರಾಮದಲ್ಲಿ ನನಗೆ ಸೇರಿದ ಜಮೀನಿನ ಅಕ್ಕಪಕ್ಕದಲ್ಲಿ ಇರುವ ಜಮೀನುಗಳ ಸ.ನ ಮತ್ತು ಚಕ್ಕುಬಂದಿ ನನಗೆ ಗೊತ್ತು. ಲಿಂಗಾಪುರ ಗ್ರಾಮದಲ್ಲಿ ನನಗೆ ಸೇರಿದ ಸ. ನಂ 24/1, ಸ.ನಂ. 7, ಸ.ನಂ 66, ಸ.ನಂ. 61/1 ಇರುತ್ತವೆ. ಸದರಿ ಸ.ನಂಬರ್ ಗಳು 3 ಎಕರೆ 17 ಗುಂಟೆ ವಿಸ್ತೀರ್ಣ ಇರುತ್ತವೆ. ಸರ್ವೆ ನಂಬರ್ 7 ರ ಪಹಣಿ ಪತ್ರಿಕೆ ನನ್ನ ಬಳಿ ಇರುತ್ತದೆ. ಸದರಿ ಸ.ನ.7 ರಲ್ಲಿ ನರಸಿಂಹಮೂರ್ತಿ ಬಿನ್ ನರಸಿಂಹಯ್ಯರವರು ಸ್ವಾಧೀನದಲ್ಲಿರುತ್ತಾರೆ. ಸದರಿ ಸ.ನಂಬರ್ ನಲ್ಲಿ 14 ಗುಂಟೆಯಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ. ಸ.ನಂ 7 ರ ಅಕ್ಕಪಕ್ಕದಲ್ಲಿ ಯಾರಿಗೆ ಸೇರಿದ ಸ.ನಂಬರ್ ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ 7 ರ ಪಶ್ಚಿಮಕ್ಕೆ ಮಣ್ಣೂರಪ್ಪನ ಜಮೀನು, ಪೂರ್ವಕ್ಕೆ ನಮಗೆ ಸೇರಿದ ಸ. ನಂ ಬರುತ್ತದೆ. ಉತ್ತರಕ್ಕೆ ನೀಲಗಿರಿ ತೋಪು, ದಕ್ಷಿಣಕ್ಕೆಹನುಮಂತರಾಯಪ್ಪನ ಜಮೀನು ಬರುತ್ತದೆ. ಸದರಿ ಚಕ್ಕು ಬಂದಿಒಳಗೆ ಸ.ನ. 6/3 ಬರುತ್ತದೆ.

2. ಶಿವಲಿಂಗಪ್ಪರವರನ್ನು ನಾನು ನೋಡಿರುವುದಿಲ್ಲ. ಸದರಿ ಶಿವಲಿಂಗಪ್ಪರವರಿಗೆ 3 ಜನ ಮಕ್ಕಳು ಇದ್ದು ಅವರನ್ನು ನಾನು ನೋಡಿರುತ್ತೇನೆ. ಶಿವಲಿಂಗಪ್ಪ ಮತ್ತು ಅವರ 3 ಜನ ಮಕ್ಕಳ ಕುಟುಂಬಕ್ಕೆ ಸೇರಿದ ಎಷ್ಟು ಆಸ್ತಿಗಳು ಇದ್ದವೆಂದು ನನಗೆ ಗೊತ್ತಿಲ್ಲ. ಶಿವಲಿಂಗಪ್ಪನ 3 ಜನ ಮಕ್ಕಳು ಒಟ್ಟು ಕುಟುಂಬದಲ್ಲಿದ್ದು ವಿಭಾಗಗಳನ್ನು ಮಾಡಿಕೊಂಡಿರಲಿಲ್ಲ. ಸ.ನಂ 6/3 ರ ಪಶ್ಚಿಮಕ್ಕೆ ಚಿಕ್ಕಹನುಮಂತಯ್ಯರವರಿಗೆ ಸೇರಿದ ಜಮೀನು ಬರುತ್ತದೆ. ಸದರಿ ಸ.ನಂ 6/3 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹನುಮಂತಯ್ಯರವರು ಸುಮಾರು 20 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ಸದರಿ ಜಮೀನು ಚಿಕ್ಕಹನುಮಂತಯ್ಯರವರಿಗೆ

ಕ್ರಯದ ಮೂಲಕ ಬಂದಿರುತ್ತದೆ. ಪ್ರತಿವಾದಿಯ ಗಂಡ ನಂಜುಂಡಯ್ಯುರವರೇ 20 ಗುಂಟೆ ಜಮೀನನ್ನು ಚಿಕ್ಕಹನುಮಂತಯ್ಯುರವರಿಗಹೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. 1963 ರಲ್ಲಿ ಚಿಕ್ಕಹನುಮಂತಯ್ಯುರವರು ಕ್ರಯಕ್ಕೆ ಪಡೆದಿದ್ದು ಅಂದಿನಿಂದ ಅವರೇ ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ, ಬೆಳೆ ಇಡುತ್ತಿದ್ದುದ್ದನ್ನು ನೋಡಿರುತ್ತೇನೆ. ದಾವಾ ಸ.ನಂ ನ 2 ಎಕರೆ 17 ಗುಂಟೆ ಜಮೀನನ್ನು ನಂಜುಂಡಯ್ಯು ಮತ್ತು ಅವರ ತಮ್ಮ ಕರಿಬಸವಯ್ಯುರವರು ವಿಭಾಗ ಮಾಡಿಕೊಂಡಿದ್ದು , ಸದರಿ ವಿಭಾಗದಲ್ಲಿ ನಂಜುಂಡಯ್ಯುರವರಿಗೆ 1 ಎಕರೆ 37 ಗುಂಟೆ ಬಂದಿದ್ದು , ಕರಿಬಸಯ್ಯುರವರಿಗೆ 20 ಗುಂಟೆ ಬಂದಿದ್ದು, ಆ 20 ಗುಂಟೆ ಜಮೀನನ್ನು ಕರಿಬಸವಯ್ಯುರವರು ಚಿಕ್ಕಹನುಮಂತಯ್ಯುರವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯ ಅಜ್ಜ ಅವರ ಜೀವಿತಾವಧಿಯಲ್ಲಿ ಸ್ವಾಧೀನದಲ್ಲಿದ್ದು ಅವರ ನಂತರ ವಾದಿ ಮತ್ತು ಅವರ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನಗೆ ಸೇರಿದ ಸ.ನಂ 7ರ ಅಕ್ಕಪಕ್ಕದಲ್ಲಿ ಸ.ನಂ 6/1ರ ಜಮೀನು ಬರುವುದಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೇನು ಗೊತ್ತಿಲ್ಲದೇ ಇದ್ದರೂ ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**